ದಿನಾಂಕಃ 12–12–2022

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:– ವಾದಿ ಪರ Sri D.K.ವಕೀಲರಿಂದಃ**

ನಾನು ಈ ದಾವೆಯಲ್ಲಿ ವಾದಿಯಾಗಿದ್ದು. ನಾನು ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಬರೆದ ಎಲ್ಲಾ ಸಂಗತಿಗಳು ಸರಿ ಇದೆ. ಅದರಲ್ಲಿ ಇರುವ ರುಜು ನನ್ನ ರುಜುವಾಗಿದೆ.

ಸಾಕ್ಷಿಯು ಹಾಜರುಪಡಿಸಿದ , ತಾಃ 17–2–1971 ರ ನೋಂದಾಯಿತ ದಾನ ಪತ್ರವನ್ನು ನಿ.ಪಿ.1 ಎಂದು, ದಿನಾಂಕಃ 22–05–1991 ರ ಮಾರಾಟ ದೃಢೀಕರಣ ಪತ್ರವನ್ನು ನಿಪಿ.2 ಎಂದು, ಅಸಲು ದಾವಾ ಸಂಖ್ಯೆಃ 91/2007 ರ ಆದೇಶ ಪುಟದ ದೃಢೀಕೃತ ನಕಲನ್ನು ನಿ.ಪಿ.3 ಎಂದು, ಸದರಿ ದಾವೆಯ ಡಿಕ್ರಿಯ ದೃಢೀಕೃತ ನಕಲನ್ನು ನಿಪಿ.4 ಎಂದು, ಎರಡು ತೆರಿಗೆ ಬೇಡಿಕೆ ವಹಿಯ ಎಕ್ಸಟ್ರಾಕ್ಟಗಳನ್ನು ನಿಪಿ.5 ಮತ್ತು 6 ಎಂದು, ಆಸ್ತಿ ತೆರಿಗೆ ರಿಜಿಸ್ಟರ್ ನ ಎಕ್ಸಟ್ರಾಕ್ಟ ನ್ನು ನಿ.ಪಿ.7 ಎಂದು, ತೆರಿಗೆ ನಿರ್ಧರಣಾ ಪಟ್ಟಿಯನ್ನು ನಿ.ಪಿ.8 ಎಂದು, ಪರವಾನಗಿಯನ್ನು ನಿ.ಪಿ.9 ಎಂದು, ಒಂದು ಕಟ್ಟಡದ ನಕ್ಷೆಯ ಪ್ರತಿಯನ್ನು ನಿ.ಪಿ.10 ಎಂದು, ಆರು ಕಂದಾಯ ಕಟ್ಟಿದ ಬಗ್ಗೆ ಚೆಲನ್ನುಗಳನ್ನು ನಿ.ಪಿ.11 ರಿಂದ 16 ಎಂದು ಗುರುತಿಸಲಾಯಿತು. ಆದ್ಧರಿಂದ , ನನ್ನ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಕೋರುತ್ತೇನೆ

**ಪಾಟೀ ಸವಾಲುಃ–** ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಶಿರಾ.